| 6 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ. | |
|---|---|
| ಸಿ.ಸಿ. ನಂ. | **8572-2015** |
| ಸಾಕ್ಷಿಯ ಹೆಸರು | ರಘುರಾಮ ಎಸ್ |
| ತಂದೆ ಹೆಸರು | ಸುಬ್ರಹ್ಮಣ್ಯ |
| ವಯಸ್ಸು | 51 ವರ್ಷ |
| ಉದ್ಯೋಗ | ಎಎಸ್ಐ- ಎಲೆಕ್ಟ್ರಾನಿಕ್ ಸಿಟಿ ಪಿ ಎಸ್ |
| ವಾಸ ಸ್ಥಳ | ಬೆಂಗಳೂರು |

ಸಾಕ್ಷಿಯನ್ನು ದಿನಾಂಕ **19-01-2024** ರಂದು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆ ः ಮಾನ್ಯ ಹಿರಿಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ ः

ನಾನು 2009 ರಿಂದ 2015 ರ ವರೆಗೆ ಮೈಕೋಲೇಔಟ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನರವೇರಿಸಿರುತ್ತೇನೆ.

ದಿನಾಂಕ 26.07.2014 ರಂದು ಚಾಸಾ-9 ರವರು ಆರೋಪಿಯನ್ನು ಪತ್ತೆ ಮಾಡಿಕೊಂಡು ಬರಲು ನನ್ನನ್ನು ನೇಮಿಸಿದರು. ಅದರಂತೆ ನಾನು ಬಾತ್ಮಿದಾರರಿಂದ ಮಾಹಿತಿ ಪಡೆದು ಬಿಟಿಎಂ 13 ನೇ ಮುಖುರಸ್ತೆಯಲ್ಲಿ ಆರೋಪಿ ಇರುವುದನನ್ನು ಖಚಿತಪಡಿಸಿಕೊಂಡು ಅವನ ಹೆಸರು ಚೇತನ್ ಬಿನ್ ವೀರಬದ್ರಯ್ಯ 28 ವಯಸ್ಸು ಎಂಬುದಾಗಿ ತಿಳಿಸಿರುತ್ತಾರೆ. ನಂತರ ಚಾಸಾ-9 ರವರ ಮುಂದೆ ಹಾಜರುಪಡಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸೆರುತ್ತಾರೆ. ಇದರ ಬಗ್ಗೆ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ ः**

ನನಗೆ ಬರವಣಿಗೆಯಲ್ಲಿ ಆರೋಪಿ ಪತ್ತೆಗಾಗಿ ಯಾವುದೇ ಲಿಖಿಪಿತ ಆದೇಶ ಕೊಟ್ಟಿರುವುದಿಲ್ಲ ಸದರಿ ಆರೋಪಿ ಚಹರೆ ಮತ್ತು ನೋಡಲು ಹೇಗಿದ್ದರು ಎಂಬುದರ ಬಗ್ಗೆ ಲಿಖಿತ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿ. ಚಾಸಾ-9 ರವರು ನಿಮಗೆ ಆರೋಪಿ ಪತ್ತೆ ಮಾಡಲು

ನೇಮಿಸಿರುವುದಿಲ್ಲ, ನೀವು ಆರೋಪಿ ಪತ್ತೆ ಮಾಡಿರುವುದಿಲ್ಲ, ನೀವು ಈ ಕೇಸಿಗೋಸ್ಕರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದು ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ನುಡಿದರು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ. ಹೇ. ಕೇ. ಸ. ಇ. ಎ. ಒ.

6 ನೇ ಅ ಮು ಮ ದಂ ನ್ಯಾ